ಮಾಡಿದ್ದ... ಪಾಂಪ್ಲೇಟು ಹಾಕ್ಸಿದ್ದೆವಲ್ಲಾ ಅದ್ರಾಗಿತ್ತಂತೆ ನಂಬರು...' ಅಂದ. ಖುಷಿಗೆ ಮಾತು ತುಂಡಾಗುತ್ತಿದ್ದವು.

'ಮೊದ್ಲು ಮಗಾನ ಕರ್ಕೊಂಡು ಸ್ಟೇಷನ್ನಿಗೆ ಬಾ... ಡೀಟೈಲ್ಸ್ ಬೇಕು. ಮಗೂ ಕ್ಷೇಮವಾಗೈತೆ ತಾನೇ?..' ಅಂತ ಖಚಿತಪಡಿಸಿಕೊಂಡೆ. ದೊಡ್ಡ ತಲೆಭಾರವೊಂದು ಇಳಿದಿತ್ತು. ತೊಂದರೆ ತಾಪತ್ರಯಗಳಿಲ್ಲದೆ ಮಗು ಸಿಗಬೇಕೆಂಬುದು ನಮ್ಮ ಆಶಯವಾಗಿತ್ತು. ಜೊತೆಗೆ ಪ್ರಕರಣಕ್ಕೆ ಅಂತ್ಯ ಕಾಣಿಸಬೇಕಾದ ಜವಾಬ್ದಾರಿಯೂ...

ಅರ್ಧಗಂಟೆಯೊಳಗೆ ಅಸ್ಗರ್ ಠಾಣೆಯಲಿದ್ದ. ಮಗು ಬೆಚ್ಚಗೆ ತಂದೆಯ ಮಡಿಲಲ್ಲಿ ಕುಳಿತಿತ್ತು. ಫೋಟೊದಲ್ಲಿದ್ದಂತೇ ಮುದ್ದುಮಗು. ಅದೇ ಅಮಾಯಕತೆ. ಆದರೆ ಒಂದೇ ಬದಲಾವಣೆ! ಕಾಣೆಯಾಗುವ ಸಮಯದಲ್ಲಿದ್ದ ಡ್ರೆಸ್ಸು ಬದಲಾಗಿತ್ತು. ಅಸ್ಗರನ ಕಡೆ ಪ್ರಶ್ನಾರ್ಥಕವಾಗಿ ನೋಡಿದೆ.

'ಮಗೂನ ಕೇಳ್ದೆ ಸಾ... ಅದಕ್ಕೆ ಹೆಚ್ಗೆ ಮಾತಾಡಕ್ಕೆ ಬರಲ್ಲ... ಆಂಟೀ, ಆಂಟೀ ಅಂತದೆ. ಹಾಕ್ಕೊಂಡಿರೋ ಡ್ರೆಸ್ಸು ತೋರ್ಸುತ್ತೆ. ಆಕೇನೇ ಕೊಡ್ಸಿರಬೌದು...' ಅಂದ. 'ಇನ್ನೊಮ್ಮೆ ಕೇಳು...' ಅಂದೆ. ಕೈಸನ್ನೆ ಬಾಯಿಸನ್ನೆ ಉಪಯೋಗಿಸಿ ತೊದಲು ತೊದಲಾದ ಉರ್ದುವಿನಲ್ಲಿ ಕೇಳಿದ. ಆಂಟೀ ಎಂಬ ಎರಡಕ್ಷರದ ಪದಗಳನ್ನು ಮುತ್ತಿನಂತೆ ಉದುರಿಸುತ್ತಿತ್ತೇ ಹೊರತು ಬೇರೆ ಉಪಯೋಗವಾಗಲಿಲ್ಲ. ವಿಚಿತ್ರ ನೋಡಿ, ಮಗು ಆರೋಪಿಗಳ ಜೊತೆ ಎರಡು ದಿನವಿದೆ. ಅವರೊಂದಿಗೆ ಒಡನಾಡಿದೆ. ಇವರೇ ಅಂತ ಹೇಳುವುದಕ್ಕೆ ಆಗ್ತಾ ಇಲ್ಲ!

ನಮ್ಮ ಕೆಲವು ಮಹಿಳಾ ಸಿಬ್ಬಂದಿಗಳು ತಾವೂ ಒಂದು ಕೈ ನೋಡೋಣವೆಂದು ಮಗುವಿನೊಡನೆ ಮಾತಿಗಿಳಿದರು. 'ಚ್ಚೂ... ಚ್ಚೂ... ಇಲ್ಲಿ ನೋಡು ಕಂದಾ...' ಅನ್ನುತ್ತಾ ವಿಚಿತ್ರ ಭಾವಭಂಗಿಗಳಿಂದ ಸೆಳೆದು ಮಾತಾಡಿಸಲು ಯತ್ನಿಸಿದರಾದರೂ ಅದು ಸೊಪ್ಪು ಹಾಕಲಿಲ್ಲ. ಎತ್ತಿ ಕೂಡಿಸಿಕೊಂಡರೆ ತಂದೆ ಹತ್ತಿರ ಹೋಗಲು ಅಳುತ್ತಿತ್ತು. ಇವರು ಏನೇ ತಾಯ್ತನದ ಅನುಭವವನ್ನು ಒರೆಗಿಟ್ಟು ಪ್ರಯತ್ನ ಪಟ್ಟರೂ ಅಸ್ಗರನನ್ನು ಬಿಟ್ಟು ಇನ್ಯಾರೂ ಅದರಿಂದ ಒಂದು ಮಾತೂ ಹೊರಡಿಸಲು ಶಕ್ಯವಾಗಲಿಲ್ಲ!

## ಕ್ಲೈಮ್ಯಾಕ್ಸಿನೆಡೆಗೆ...

ಮರುದಿನ ಮತ್ತೆ ಅಸ್ಗರನನ್ನು ಕರೆಸಿದೆ. ದಿನ ಕಳೆದಷ್ಟು ಸಾಕ್ಷ್ಯಗಳು ನಾಶವಾಗುವ ಸಾಧ್ಯತೆಗಳಿದ್ದವು. ಅಲ್ಲದೆ ಬೇರೆ ಪ್ರಕರಣಗಳ ನಡುವೆ ಸಿಲುಕಿ ನಮಗೇ ಆಸಕ್ತಿ ಕಡಿಮೆಯಾಗಿಬಿಟ್ಟರೆ? ಹಾಗೇನಾದರೂ ಆದರೆ ಪ್ರಕರಣ ಪತ್ತೆಯಾಗದೇ ಉಳಿದುಬಿಡುವ ಸಂಭವವಿತ್ತು. ಹೇಗೂ ಮಗು ಸಿಕ್ಕಿದೆ ಅನ್ನುವ ಧೈರ್ಯ ಇತ್ತಲ್ಲ? ಹಾಗಾಗಬಾರದೆಂದು ನಿರ್ಧರಿಸಿದ್ದೆ. ಪ್ರತಿ ಪ್ರಕರಣಕ್ಕೂ ತಾರ್ಕಿಕವಾದ್ದೊಂದು ಅಂತ್ಯ ಮತ್ತು ನ್ಯಾಯ ದೊರಕಿಸುವುದು ತನಿಖಾಧಿಕಾರಿಯ ಜವಾಬ್ದಾರಿ.

'ಅಸ್ಗರ್ ಇಲ್ಲಿ ನೋಡು... ಆ ದಿನ ನಿನಗೆ ಫೋನ್ ಮಾಡಿ ಮಗು ಸಿಕ್ಕಿದೆ ಎಂದು ಹೇಳ್ದೋರು ಯಾರು?... ಕರೆಕ್ಟಾಗಿ ಹೇಳು...' ಕೇಳಿದೆ. 'ಉಸ್ಮಾನ್ ಅನ್ನೋ ಡ್ರೈವರು ಸಾ... ಯಾರೋ ದರ್ಗಾದಾಗೆ ಮಗಾನ...' ಅಂತ ಟೇಪು ತಿರುವಲಾರಂಭಿಸಿದ.

'ಸ್ವಲ್ಪ ಇರೋ, ಉಸ್ಮಾನ್ ಅನ್ನೋನು ನಿಂಗೆ ಫೋನ್ ಮಾಡಿ ಹೇಳಿದ. ಸರಿ, ಅವ್ನ ನಂಬ್ರು ಕೊಡು.'